(ಸಿಸಿ) ಅಧ್ಯಕ್ಷರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿ ;
(ಸಿಡಿ) ನಿರ್ದೇಶಕರು, ಪಟ್ಟಣ ಯೋಜನೆ;
(ಸಿಇ) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ :
(ಡಿ) ಮಂಡಲಿಯ ಕಾರ್ಯ ನಿರ್ವಾಹಕ ಸದಸ್ಯರು ; ಮತ್ತು
(ಇ) ಭಾರತೀಯ ಕೈಗಾರಿಕಾಭಿವೃದ್ಧಿ ಬ್ಯಾಂಕಿನ ಇಬ್ಬರು ನಾಮನಿರ್ದೇಶಿತ ವ್ಯಕ್ತಿಗಳು.

ಸಭೆಗೆ ಬಹಿಷ್ಕಾರವೆಸಗಿದ್ದ ಭಾ.ಜ.ಪ. ಸದಸ್ಯರ ಪುನರಾಗಮನ

+ ಶ್ರೀ ರುಕ್ಮಯ್ಯಪೂಜಾರಿ (ವಿಟ್ಲ):- ಸನ್ಮಾನ್ಯ ಸಭಾಧ್ಯಕ್ಷೀಣಿಯವರೇ ನಾವು ಕಳೆದ 5-6 ದಿವಸಗಳಿಂದ ಸದನದ ಕಾರ್ಯಕಲಾಪಗಳಿಗೆ ಬಹಿಷ್ಕಾರ ಹಾಕಿದ್ದೆವು. ಇವತ್ತು ಬೆಳಿಗಿನಿಂದ ಬಹಿಷ್ಕಾರವನ್ನು ವಾಪಸ್ ಪಡೆದು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂಥ ತೀರ್ಮಾನವನ್ನು ನಮ್ಮ ಪಕ್ಷದ ವತಿಯಿಂದ ಮಾಡಿ ಇಂದಿನಿಂದ ಭಾಗವಹಿಸುತ್ತಿದ್ದೇವೆ. ನಾವು ಬಹಿಷ್ಕಾರ ಮಾಡಿದಂಥ ವಿಚಾರ ಸದನಕ್ಕೆ ಗೊತ್ತಿದೆ. ಸಂಸದೀಯ ವ್ಯವಸ್ಥೆಯಲ್ಲಿ ಆಯವ್ಯಯ ಪತ್ರ ಅತ್ಯಂತ ಒಂದು ಗುಪ್ತವಾದ ದಾಖಲಾತಿ. ಅದನ್ನು ಕಾಪಾಡುವಂಥದ್ದು ಮತ್ತು ಬಹಿರಂಗಪಡಿಸದೆ ಇರತಕ್ಕಂಥದ್ದು ಸರ್ಕಾರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಆದರೆ ಸರ್ಕಾರ ಆ ಒಂದು ದಿಕ್ಕಿನಲ್ಲಿ ಒಂದು ಅಪರಾಧ ಮಾಡಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸದನದ ಸತ್ಸಂಪ್ರದಯ ಏನೆಂದರೆ ಬಜೆಟ್ ಮಂಡನೆ ಮಾಡಿದ ನಂತರ ಅದನ್ನು ಇನ್ಸಿಮೇಟ್ ಮಾಡುವುದು, ಚರ್ಚೆ ಪ್ರಾರಂಭ ಮಾಡುವುದು ಕೂಡ ವಿರೋಧಪಕ್ಷದ ನಾಯಕರ ಕಡೆಯಿಂದ ಇದ್ದು ಅದು ಇಷ್ಟು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆದರೆ ಈ ಸಾರಿ ಅದಕ್ಕೆ ತಿಲಾಂಜಲಿ ಕೊಟ್ಟು ಸರ್ಕಾರದ ವತಿಯಿಂದಲೇ ಚರ್ಚೆಯನ್ನು ಪ್ರಾರಂಭ ಮಾಡಿಸಿದ್ದಾರೆ. ಇದೂ ಕೂಡ ಸರ್ಕಾರದ ಲೋಪವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಸರ್ಕಾರವು ಪ್ರತಿಯೊಂದು ಹಂತದಲ್ಲೂ ಕೂಡ ವಿರೋಧಪಕ್ಷದ ಮಾನ್ಯ ಸದಸ್ಯರುಗಳಿಗೆ ಅಗೌರವದ ರೀತಿಯಲ್ಲಿ ವ್ಯವಹಾರ ಮಾಡಿರುವುದಕ್ಕೆ ನಮ್ಮದು ತೀವ್ರ ಪ್ರತಿಭಟನೆ ತೋರಿಸುವ ದೃಷ್ಟಿಯಿಂದ ಈ ಸದನದ ಕಾರ್ಯಕಲಾಪಗಳಿಗೆ ಬಹಿಷ್ಕಾರವನ್ನು ಹಾಕಿದ್ದೆವು. ಈ ಬಗ್ಗೆ ನಮ್ಮ ಪ್ರತಿಭಟನೆ ಕೂಡ ಇದೆ. ಆದರೂ ಕೂಡ ನಡೆದಂಥ ಮಾತಿನ ವಿಷಯ ಹಾಗೂ ಮಾನ್ಯ ಸಭಾಧ್ಯಕ್ಷರ ಮಧ್ಯಸ್ಥಿಕೆ ಒಂದು ಹಿನ್ನೆಲೆಯಲ್ಲಿ ಸರ್ಕಾರದ ಮಾನ್ಯ ಸಚಿವರುಗಳಾದ ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮತ್ತು ಮಾನ್ಯ ವೀರಪ್ಪಮೊಯಿಲಿಯವರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರುಗಳು ಸಮಕ್ಷಮದಲ್ಲಿ ಮಾನ್ಯ ಅಧ್ಯಕ್ಷರ ಮನೆಯಲ್ಲಿ ಮೀಟಿಂಗ್ ನಡೆಸಿ ಅಲ್ಲಿ ಒಂದು ಒಮ್ಮತದ ತೀರ್ಮಾನಕ್ಕೆ ಬಂದೆವು. ಅದು ಏನೆಂದರೆ ಈ ಬಜೆಟ್ ಗೌಪ್ಯ ವಿಚಾರ ಇಟ್ಟುಕೊಳ್ಳಲಿಕ್ಕೆ ಕಷ್ಟವಾಯಿತು. ಆದರೂ ಸರ್ಕಾರದ ಹಿತದೃಷ್ಟಿಯಿಂದ ಈ ಹಿನ್ನೆಲೆಯಲ್ಲಿ ರಾಜ್ಯದ ನಾಲ್ಕೂವರೆಕೋಟಿ ಜನರ ಹಿತದೃಷ್ಟಿಯಿಂದ ಈ ಐದು ದಿನಗಳ ಸದನದ ಕಲಾಪಗಳಿಗೆ ಬಹಿಷ್ಕಾರ ಹಾಕಿದ್ದನ್ನು ಹಿಂತೆಗೆದುಕೊಂಡು ಕಲಾಪದಲ್ಲಿ ನಾವು ಭಾಗವಹಿಸಲು ತೀರ್ಮಾನ ಮಾಡಿದೆವು. ಮಾನ್ಯ ಸಭಾಧ್ಯಕ್ಷರ ಸಮ್ಮುಖದಲ್ಲಿ ಬಂದ ಅಭಿಪ್ರಾಯದಂತೆ, ಎರಡು ಅಭಿಪ್ರಾಯಗಳು ಒಂದು ಸದನದ ಸಮಿತಿ ಮಾಡುವಂಥದ್ದು, ಮತ್ತು ವಿರೋಧಪಕ್ಷದ ನಾಯಕರಿಗೆ ಬಜೆಟ್ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡದಿರುವುದು. ಇದರ ಬಗ್ಗೆ ಸರ್ಕಾರ ತಪ್ಪು ಒಪ್ಪಿಕೊಂಡಂತಾದರೂ ಒಮ್ಮತದ ಅಭಿಪ್ರಾಯದಲ್ಲಿ ಮೂಡಿಬಂದಂತೆ ಅದರ ಒಂದು ಆಧಾರದಮೇಲೆ ನಾವು ಇಂದು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲಿಕ್ಕೆ ಪ್ರಯತ್ನ ಮಾಡಿದೆವು. ಆದರೆ ಇನ್ನೂ ಕೂಡ ಮಾನ್ಯ ವಿರೋಧಪಕ್ಷದ ಮಿತ್ರರು, ಪಕ್ಷದ ನಾಯಕರು ಸದನದ ಕಾರ್ಯಕಲಾಪಗಳಿಗೆ ಭಾಗವಹಿಸಲಿಲ್ಲ. ನಾನು ತಮ್ಮ ಮೂಲಕ

ಸರ್ಕಾರವನ್ನು ಒತ್ತಾಯಿಸುತ್ತೇನೆ, ಅವರ ಮನವೊಲಿಸಿ ಇವತ್ತು ನಾಲ್ಕೂವರೆಕೋಟಿ ಜನರ ಹಿತದೃಷ್ಟಿಯಿಂದ, ನಮ್ಮ ರಾಜ್ಯದ ಹಲವಾರು ಸಮಸ್ಯೆಗಳನ್ನು ಚರ್ಚೆ ಮಾಡುವ ದೃಷ್ಟಿಯಿಂದ ಅವರು ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಸರ್ಕಾರ ಅವರ ಮನವನ್ನು ಒಲಿಸಲು ಆ ದಿಕ್ಕಿನಲ್ಲಿ ಸರ್ಕಾರ ಏನು ಪ್ರಯತ್ನ ಪಟ್ಟಿದೆ ಎನ್ನುವುದನ್ನು ಕೂಡ ಈ ಸದನಕ್ಕೆ ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ವಿರೋಧ ಪಕ್ಷದವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಮನವಿ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾನ್ಯ ಸದಸ್ಯರಾದ ಪೂಜಾರಿಯವರ ಕಳಕಳಿ ಸರ್ಕಾರಕ್ಕೆ, ಸದನಕ್ಕೆ ಸಂಪೂರ್ಣವಾಗಿ ಅರ್ಥವಾಗಿದೆ. ವಿಷಯಗಳು ಏನು, ಯಾವ ಕಾರಣಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ ಕೆಲವರು ಬಹಿಷ್ಕಾರ ಹಾಕಿದ್ದಾರೆ ಎಂಬುದನ್ನು ಕೂಡ ಅತಿ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ಒಪ್ಪುತ್ತೇನೆ. ಸದನದ ಕಾರ್ಯಕಲಾಪಗಳು ಒಳ್ಳೆಯ ರೀತಿಯಲ್ಲಿ ನಡೆಯುವುದಕ್ಕೆ ವಿರೋಧ ಪಕ್ಷದ ಪಾತ್ರ ಅತಿ ದೊಡ್ಡದು ಮತ್ತು ಅಗತ್ಯ. ಈ ಮಾತನ್ನು ನಾನು ಅಲ್ಲಗಳೆಯುವುದಿಲ್ಲ. ನಾನು ಅದಕ್ಕಾಗಿ ಪದೇ ಪದೇ ಸರ್ಕಾರದ ಪರವಾಗಿ ಮನವಿ ಮಾಡಿದ್ದೇನೆ. ಈ ಹಿಂದೆಯೂ ಕೂಡ ನಾನು ಮನವಿ ಮಾಡಿದ್ದೇನೆ, ಮಾನ್ಯ ಸಂಸದೀಯ ವ್ಯವಹಾರ ಸಚಿವರು ಮನವಿ ಮಾಡಿದ್ದಾರೆ. ಅವರು ಬರಬೇಕು ಚರ್ಚೆಯಲ್ಲಿ ಭಾಗವಹಿಸಬೇಕು; ಯಾವ ಯಾವ ರಾಜಕೀಯ ಪಕ್ಷಗಳು ಅಥವಾ ಪಕ್ಷೇತರರು ಬಹಿಷ್ಕಾರದ ಹೆಸರಿನಲ್ಲಿ ಹೊರಗಡೆ ಉಳಿದಿದ್ದಾರೆ ಅವರೆಲ್ಲರೂ ಸಭೆಗೆ ಬರಬೇಕೆಂಬ ಮಾತನ್ನಾಡಿದ್ದೇವೆ. ಈಗ ಬಡ್ಜೆಟ್‌ನ್ನು ಸದನದ ಮುಂದಿಡಲಾಗಿ. ಬಡ್ಜೆಟ್ ಬಹಿರಂಗವಾಗಿಲ್ಲ ಎಂಬ ಅಭಿಪ್ರಾಯ ನಮ್ಮದು; ಬಹಿರಂಗವಾಗಿದೆ ಎಂಬ ಅಭಿಪ್ರಾಯ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ ಕೆಲವರದು. ಬಡ್ಜೆಟ್ ಬಹಿರಂಗಗೊಂಡರೆ ಇಡೀ ಮಾರುಕಟ್ಟೆಯಲ್ಲಿ ಅಥವಾ ಸಮಾಜದ ಮೇಲೆ ಅದರ ಪರಿಣಾಮ ಇಷ್ಟರೊಳಗೆ ಆಗಬೇಕಾಗಿತ್ತು. ಆದು ಏನು ಇಲ್ಲವೆಂದು ನಾನು ಹೇಳಿದ್ದೇನೆ. ಇಂದೂ ಹೇಳುತ್ತೇನೆ, ಮುಂದೆ ಕೂಡ ಏನೂ ಆಗುವುದಕ್ಕೆ ಸಾಧ್ಯವಿಲ್ಲ. ಆಗುವುದು ಇದ್ದರೆ ಇಷ್ಟರೊಳಗೆ ಮುಗಿದುಹೋಗಬೇಕಾಗಿತ್ತು. ಮುಂದೆ ಅದು ಸಾಧ್ಯವಿಲ್ಲ. ಬಡ್ಜೆಟ್ ಪ್ರೊಪೋಸಲ್‌ಗೆ ಸಂಬಂಧಪಟ್ಟ ಟ್ಯಾಕ್ಸೇಷನ್ ಮ್ಯಾಟರ್ ಬಹಿರಂಗವಾಗಿದ್ದರೆ ಅದರ ಪರಿಣಾಮ ಇಷ್ಟುನೊತ್ತಿಗೆ ಹೊರಬರಬೇಕಾಗಿತ್ತು. ಇಂಥದ್ದು ಏನೂ ಇಲ್ಲವೆಂಬ ಮಾತನ್ನು ಆ ದಿವಸ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಪೂಜಾರಿಯವರ ಗಮನಕ್ಕೆ ತರುವುದು ಇಷ್ಟೆ. ಸರ್ಕಾರದ ನಿಲುವನ್ನು ಸ್ಪಷ್ಟಪಡಿಸುತ್ತೇನೆ. ಯಾವುದೇ ಸಂದರ್ಭದಲ್ಲಿ ಬಡ್ಜೆಟ್‌ನಲ್ಲಿರತಕ್ಕ ಅಂಶಗಳು ಬಹಿರಂಗಗೊಂಡಿಲ್ಲ, ಇದು ಸರ್ಕಾರದ ನಿಲುವು. ಇಷ್ಟಾದರೂ ಅದಕ್ಕೆ ಸದನದ ಸಮಿತಿ ಆಗಬೇಕೆಂಬ ವಿಚಾರವನ್ನು ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ ತಾವು ಕೂಡ ಇಟ್ಟಿದ್ದೀರಿ. ತಾವು ಹೇಳುವ ಹಾಗೆ ಅಲ್ಲಿ ಚರ್ಚೆ ಖಾಸಗಿಯಾಗಿ ನಡೆದಂಥ ಸಂದರ್ಭದಲ್ಲಿ ಆ ವಿಚಾರ ಪ್ರಸ್ತಾಪಕ್ಕೆ ಬಂದಿದೆ. ಆದರೆ ಆದರ ಬಗ್ಗೆ ಏನೆಂದು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ನಾನು ತಮ್ಮ ಮಾತನ್ನು ಸಂಪೂರ್ಣ ಬದಿಗೊತ್ತಿ ಮಾತನಾಡುತ್ತೇನೆಂದು ತಿಳಿದುಕೊಳ್ಳಬೇಡಿ. ನಾನು ಕೆಲವು ಕಾರಣಗಳಿಂದ ಏನೂ ಹೇಳುತ್ತಿಲ್ಲ, ಆದರೆ ಇಷ್ಟ ಮಾತ್ರ ಹೇಳಬಲ್ಲೆ, ಬಹಳ ವಿಚಾರಗಳು ಸಲಹೆ ರೂಪದಲ್ಲಿ ಬಂದಂತ ಕಾಲದಲ್ಲಿ ಸರ್ಕಾರ ಅದನ್ನು ಯಾವುದೇ ವಿಚಾರದಲ್ಲಿ ನೀವು ಹೇಳುವುದು ತಪ್ಪು ಮತ್ತೊಂದು ಎಂದು ನೋಡುತ್ತಿಲ್ಲ, ಯಾವುದು ಈ ಸದನದ ಕಾರ್ಯಕಲಾಪಗಳು ನಡೆಯುವುದಕ್ಕೆ ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಸರ್ಕಾರ ಏನು ಮಾಡಬೇಕು ಅದನ್ನು ಮಾಡುವುದಕ್ಕೆ ಸದಾ ಸಿದ್ಧವಿದೆ ಎಂದು ಹಿಂದೆ ಹೇಳಿದ ಹಾಗೆ ಈಗಲೂ ಪುನರುಚ್ಚಾರ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಅವರ ಮನ ಒಲಿಸಬೇಕೆಂಬ ಮಾತನ್ನು ಹೇಳಿದ್ದೀರಿ. ಅದೇ ಪ್ರಯತ್ನವನ್ನು ತಮ್ಮ ಕಣ್ಮುಂದೆ ಮಾಡಿದ್ದೇವೆ. ಇಲ್ಲಿಯೂ